ದಿನಾಂಕಃ **05-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ,**

1) ನಾನು ದಿಃ 02-02-1983 ರಲ್ಲಿ ಜನಿಸಿರುತ್ತೇನೆ. ದಿಃ 03-05-1976 ರಂದು ಲಿಂಗಪ್ಪ ರವರು ಮರಣ ಶಾಸನ ಮಾಡಿರುವ ವಿಷಯ ನನಗೆ ಸಂಪೂರ್ಣವಾಗಿ ಗೊತ್ತಿರುವುದಿಲ್ಲ ಆದರೆ ನಮ್ಮ ತಂದೆಯವರು ತಿಳಿಸಿದ್ದರು. ದಿಃ 03-05-1976 ರ ಮರಣ ಶಾಸನ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. 03-05-1976 ರ ಮರಣ ಶಾಸನದ ಪ್ರಕಾರ ಲಿಂಗಪ್ಪ ರವರು ತಮ್ಮ ಐದು ಜನ ಹೆಣ್ಣು ಮಕ್ಕಳಿಗೆ ಆಸ್ತಿ ನೀಡಿದ್ದರು ಎಂದರೆ ಸರಿಯಲ್ಲ. 03-05-1976 ರ ಮರಣ ಶಾಸನದ ಪ್ರಕಾರ ಸರ್ವೆ ನಂ. 145/3 ರಲ್ಲಿ 30 ಗುಂಟೆ ಜಮೀನು ವಾದಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ವಿಭಾಗದ ಮೂಲಕ ಬಂದಿರುತ್ತದೆ ಎಂದು ನುಡಿಯುತ್ತಾರೆ. ಮರಣ ಶಾಸನದ ಪ್ರಕಾರ ವಾದಿ ಯ ಹೆಸರಿಗೆ ಸದರಿ ಸ್ವತ್ತು ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2) ಲಿಂಗಪ್ಪ ರವರು ನನ್ನನ್ನು ದತ್ತು ಪಡೆದ ಬಗ್ಗೆ ಈಗ ದಾಖಲೆ ಇರುವುದಿಲ್ಲ. ನನ್ನ ದಾಖಲೆಗಳಲ್ಲಿ ನನ್ನ ತಂದೆಯ ಹೆಸರು ಸೋಮಣ್ಣ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಲಿಂಗಪ್ಪ ರವರು ನನ್ನನ್ನು ದತ್ತು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ತಕರಾರಿನ ಬಗ್ಗೆ ನನಗೆ ಗೊತ್ತಿರುತ್ತದೆ. ನಾನು 1 ರಿಂದ 3 ನೇ ಪ್ರತಿವಾದಿಗಳಿಂದ ಸಾಕ್ಷಿ ನುಡಿಯಲು ಯಾವುದೇ ಮಾಹಿತಿ ಪಡೆದುಕೊಂಡಿರುವುದಿಲ್ಲ, ಸ್ವಇಚ್ಛೆಯಿಂದ ಸಾಕ್ಷಿ ನುಡಿಯುತ್ತಿದ್ದೇನೆ. ನಾನು ಕಳೆದ ವಿಚಾರಣಾ ಸಮಯದಲ್ಲಿ ಲಿಂಗಪ್ಪ ರವರ ನಡುವೆ ಆದ ವಿಭಾಗ ಪತ್ರವನ್ನು ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

3) ಲಿಂಗಪ್ಪರವರ ಹೆಣ್ಣು ಮಕ್ಕಳಿಗೆ ವಿಭಾಗದಲ್ಲಿ ತಲಾ 30 ಗುಂಟೆ ಬಂದಿದ್ದು, ಭಾಗ್ಯಮ್ಮ ರವರಿಗೆ ಸರ್ವೆ ನಂ. 27/5 ಎ 1, 27/5 ಎ 2 ಆಸ್ತಿಯೂ ಸಹ ಹೆಚ್ಚಿನ ಭಾಗ ಭಾಗಮ್ಮ ರವರಿಗೆ ಬಂದಿದೆ ಎಂದು ನುಡಿಯುತ್ತಾರೆ. ಲಿಂಗಪ್ಪ ರವರು ಭಾಗ್ಯಮ್ಮ ರವರಿಗೆ 27/5 ಎ 1 ಮತ್ತು 27/5 ಎ 2 ಭಾಗದ ಮೂಲಕ ನೀಡಿರುವ ಬಗ್ಗೆ ದಾಖಲೆ ಇರುತ್ತದೆ.

(ಈ ಹಂತದಲ್ಲಿ ಸಾಕ್ಷಿಯು ಸಮಂಜಸವಾದ ಉತ್ತರ ನೀಡದ ಕಾರಣ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.